<u>**ಪ್ರಥಮ ದರ್ಜೆ ನ್ಯಾಯಿಕಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು**</u>

<u>**ಸಿಸಿ ಸಂಖ್ಯೆ: 448/2014**</u>

| | |
|---|---|
| ಫ್ರಾಸಾ | 12 |
| ಚಾಸಾ | 22 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **24.09.2024.**

ಸಾಕ್ಷಿಯ ಹೆಸರು : ನಾಗರಾಜ್
ತಂದೆಯ ಹೆಸರು : ಕದಿರಪ್ಪ
ವಯಸ್ಸು : 61 ವರ್ಷ
ಉದ್ಯೋಗ : ನಿವೃತ್ತ ಡಿ.ವೈ.ಎಸ್.ಪಿ
ವಾಸಸ್ಥಳ : ಕೋಲಾರ

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

<u>**ಮುಖ್ಯ ವಿಚಾರಣೆ : ಎಪಿಪಿರವರಿಂದಃ**</u>

ನಾನು 30.09.2013 ರಿಂದ 22.09.2015 ರವರೆಗೆ ಗೌರಿಬಿದನೂರಿನ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ನಾನು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಿ.ಎಸ್.ಐ. ಚಾಸಾ-21 ರವರಿಂದ ದಿನಾಂಕ 03.10.2013 ರಂದು ಪಡೆದಿರುತ್ತೇನೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿರುತ್ತೇನೆ. ದಿನಾಂಕ 21.10.2013 ರಂದು ನಿಪಿ-8 ರಂತೆ ಶವ ಪರೀಕ್ಷಾ ವರದಿಯನ್ನು ಪಡೆದಿರುತ್ತೇನೆ. ನಿಪಿ-8 ರಲ್ಲಿರುವ

ಸಾಕ್ಷಿಯ ಸಹಿಯನ್ನು **ನಿಪಿ–8(ಎ)** ಎಂದು ಗುರುತಿಸಲಾಯಿತು. ದಿನಾಂಕ 04.02.2014 ರಂದು ಚಾಸಾ–1 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 08.02.2014 ರಂದು ಆರೋಪಿ ತುಳಸೀಧರ್ ಹಾಗೂ ಅಪಘಾತಕ್ಕೆ ಒಳಪಟ್ಟ ವಾಹನ ಸಂಖ್ಯೆ ಕೆಎ–53–ವೈ–5207 ಆಕ್ಟಿವಾ ಹೊಂಡಾ ದ್ವಿಚಕ್ರ ವಾಹನವನ್ನು ಸಿಬ್ಬಂದಿಗಳಾದ ರಿಜ್ವಾನ್ ಮತ್ತು ರಾಮಸ್ವಾಮಿರವರು ಹೊಸಕೋಟೆಯಿಂದ ಆರೋಪಿಯನ್ನು ವಶಪಡಿಸಿಕೊಂಡು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿಯನ್ನು ನಾನು ವಿಚಾರಣೆ ಮಾಡಿ ದಸ್ತಗಿರಿ ಕ್ರಮವನ್ನು ಅನುಸರಿಸಿ ಕೃತ್ಯ ನಡೆದ ಸ್ಥಳಕ್ಕೆ ಆರೋಪಿಯನ್ನು ಕರೆದುಕೊಂಡು ಹೋಗಿ, ತಪಾಸಣೆ ನಂತರ ಹಿಂದಿರುಗಿರುತ್ತೇನೆ. ದಿನಾಂಕ 09.02.2014 ರಂದು ಅಮಾನತ್ತುಪಡಿಸಿಕೊಂಡು ದ್ವಿಚಕ್ರ ವಾಹನವನ್ನು ಪಂಚರಾದ ಚಾಸಾ–14 ಮತ್ತು 15 ರವರ ಸಮಕ್ಷಮ ನಿಪಿ–10 ರಂತೆ ವಾಹನ ಅಮಾನತ್ತು ಪಂಚನಾಮೆ ನಡೆಸಿ ವಶಪಡಿಸಿಕೊಂಡಿರುತ್ತೇನೆ. ಸಾಕ್ಷಿಯ ಸಹಿಯನ್ನು **ನಿಪಿ–10(ಬಿ)** ಎಂದು ಗುರುತಿಸಲಾಯಿತು. ನಂತರ ಸದರಿ ವಾಹನವನ್ನು ಸ್ವತ್ತಿನ ಪಟ್ಟಿ ಸಂಖ್ಯೆ 19/2014, ದಿನಾಂಕ 08.02.2014 ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಸ್ವತ್ತಿನ ಪಟ್ಟಿಯನ್ನು **ನಿಪಿ–14 ಹಾಗೂ ಸಾಕ್ಷಿಯ** ಸಹಿಗಳನ್ನು **ನಿಪಿ–14(ಎ) ಮತ್ತು (ಬಿ)** ಎಂದು ಗುರುತಿಸಲಾಯಿತು. ದಿನಾಂಕ 08.02.2014 ರಂದು ಸಾಕ್ಷಿದಾರರಾದ ಚಾಸಾ–2 ರಿಂದ 12 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 18.02.2014 ರಂದು ಅಪಘಾತಪಡಿಸಿದ ದ್ವಿಚಕ್ರ ವಾಹನವನ್ನು ತಪಾಸಣೆ ಮಾಡುವ ಸಂಬಂಧ ಚಿಕ್ಕಬಳ್ಳಾಪುರದ ಮೋಟಾರು ವಾಹನ ನಿರೀಕ್ಷಕರಿಗೆ ಮನವಿ ಮಾಡಿರುತ್ತೇನೆ. ದಿನಾಂಕ 01.05.2014 ರಂದು ಮೋಟಾರು ವಾಹನ ವರದಿಯನ್ನು

ನಿಪಿ–9 ರಂತೆ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು **ನಿಪಿ–9(ಎ)** ಎಂದು ಗುರುತಿಸಲಾಯಿತು. ದಿನಾಂಕ 04.03.2014 ರಂದು ದ್ವಿಚಕ್ರ ವಾಹನವನ್ನು ಚಾಸಾ–16 ರವರಿಂದ ನಿಪಿ–11 ರಂತೆ ನಷ್ಟ ಪೂರೈಕೆ ಬಾಂಡ್ ಪಡೆದು ಬಿಡುಗಡೆ ಗೊಳಿಸಿರುತ್ತೇನೆ. ನಿಪಿ–11 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–11(ಸಿ)** ಎಂದು ಗುರುತಿಸಲಾಯಿತು. ದಿನಾಂಕ 01.05.2014 ರಂದು ತನಿಖೆಯನ್ನು ಪೂರೈಸಿ ಆರೋಪಿಯ ಬಳಿ ವಾಹನ ಚಾಲನ ಪರವಾನಗಿ ಹಾಗೂ ಆರ್.ಸಿ. ಇಲ್ಲದ ಕಾರಣ ಆರೋಪಿಯ ಮೇಲಿನ ಆರೋಪ ಸಾಬೀತಾಗಿರುವುದರಿಂದ ಅಂತಿಮ ವರದಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀಸವಾಲು : ಶ್ರೀ ಜಿ.ಎನ್.ಎ. ವಕೀಲರಿಂದ, ಆರೋಪಿ ಪರವಾಗಿಃ**

ನಾನು ಯಾವುದೇ ವಾಹನವನ್ನು ಅಮಾನತ್ತು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನಾನು ಅಪಘಾತ ಸ್ಥಳಕ್ಕೆ ಭೇಟಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅಮಾನತ್ತು ಪಂಚನಾಮೆಯನ್ನು ಪಂಚರ ಸಮಕ್ಷಮ ನೆಡಸಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ವಿಳಾಸವನ್ನು ಪಡೆದಿರುತ್ತೇನೆ. ದಿನಾಂಕ 04.02.2014 ರಂದು ಪ್ರಾಸಾ–1 ರವರ ಮರು ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 09.02.2014 ರಂದು ನಾನು ಯಾವುದೇ ರೀತಿಯ ವಾಹನವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳಿಗೋಸ್ಕರ ಆರೋಪಿಯ ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಮೃತರು ಮಧ್ಯಪಾನ ಮಾಡಿ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಯಾವುದೋ ವಾಹನ ಡಿಕ್ಕಿಪಡಿಸಿ

ಮೃತರಾಗಿದ್ದಾರೆ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ವಿಮೆ ಹಣ ದೊರಕಿಸಲು ಸುಳ್ಳು ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿ ತೋರಿಸಿರುವ ಸಾಕ್ಷಿದಾರರು ಮೃತರ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಠಾಣೆಯಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಗೌರಿಬಿದನೂರು